**ಓ.ಎಸ್. ನಂ. 239/2018**

**ಪಿ.ಡಬ್ಲ್ಯೂ: 02 (Basavanagouda)**

**ದಿನಾಂಕ:-29.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಪ್ರತಿವಾದಿ ಪರ – ಶ್ರೀ.T.M.S ವಕೀಲರಿಂದ.**

ನಾನು ವ್ಯವಸಾಯ ಮಾಡುತ್ತೇನೆ. ನನ್ನ ಮನೆಯಲ್ಲಿ 40 ವರ್ಷಗಳಿಂದ ವೈದ್ಯರ ವೃತ್ತಿ ಮಾಡುತ್ತಿದ್ದೇನೆ ಎಂದರೆ ಸರಿ. ರಾಜಕೀಯದಲ್ಲಿ ತೊಡಗಿದ್ದೆನೆ ಎಂದರೆ ಸರಿ. ನಾನು ಬಿ.ಜೆ.ಬಿ ಕಡೆಯ ಓಡಾಡುತ್ತೇನೆ ಎಂದರೆ ಹೌದು. ಪ್ರತಿವಾದಿ ಕಾಂಗ್ರೆಸ್ ಕಡೆ ಎಂದರೆ ನನಗೆ ಗೊತ್ತಿಲ್ಲ. ನನಗೂ ಪ್ರತಿವಾದಿಗೂ ರಾಜಕೀಯ ದ್ವೇಷ ಇದೆ ಎಂದರೆ ಇಲ್ಲ. ಸದರಿ ದಾವೆಯನ್ನು ಬೋರಯ್ಯ ಎಂಬುವವರು ಹಾಕಿರುತ್ತಾರೆ. ದಾವೆಯನ್ನು ತಿಪ್ಪೆರುದ್ರಪ್ಪ ಎಂಬುವವರ ಮೇಲೆ ಸಲ್ಲಿಸಿರುತ್ತಾರೆ. ಸರ್ವೆ ನಂಬರ್ 154 ಬಿ ಪೈಕಿ 4 ಎಕರೆಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ಅದು ನಮ್ಮ ಆಸ್ತಿ ಎಂದು ದಾವೆಯನ್ನು ಸಲ್ಲಿಸಿರುತ್ತಾರೆ.ಸರ್ವೆ ನಂಬರ್ 154 ಬಿ ಒಟ್ಟು 13.64 ಎಕರೆ ಇದೆ ಎಂದರೆ ಹೌದು. ಇದು ಮುಲತಃ ಸರಕಾರಿ ಜಮೀನು ಎಂದರೆ ಹೌದು.

ಪ್ರತಿವಾದಿ ಒಡಹುಟ್ಟಿದವರು ಒಟ್ಟು ನಾಲ್ಕು ಜನ ಎಂದರೆ ಇರಬಹುದು. ದೊಡ್ಡ ಬೋರಯ್ಯ, ಸಣ್ಣ ಬೋರಯ್ಯ, ಬೋಸಮ್ಮ ಹಾಗೂ ಪ್ರತಿವಾದಿ ಎಂದರೆ ಹೌದು. ದೊಡ್ಡ ಬೋರಯ್ಯ ಈ ಸರ್ವೆ ನಂಬರ್ ನಲ್ಲಿ ಒಟ್ಟು 3.64 ಎಕರೆ, ಸಣ್ಣ ಬೋರಯ್ಯ 4.14 ಎಕರೆ, ದಾಸರ ಓಬಯ್ಯ ಅಂದರೆ ಪ್ರತಿವಾದಿ 3.00 ಎಕರೆ ಮತ್ತು ಬೋಸಮ್ಮ 3.00 ಎಕರೆ ಜಮೀನು ಅನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಇಲ್ಲ. ಅವರು ಪಟ್ಟ ಕೇಳಿ ಅರ್ಜಿ ಸಲ್ಲಿಸಿರುವುದು ಗೊತ್ತಿಲ್ಲ.

ನನ್ನ ಪ್ರಕಾರ ವಾದಿ ಅದನ್ನು ದಾವ ಸ್ವತ್ತನ್ನು ಉಳುಮೆ ಮಾಡುತ್ತಿದ್ದಾರೆ. ಅದನ್ನು ಟ್ರಿಬ್ಯೂನಲ್ ನಲ್ಲಿ ಪಟ್ಟಾ ನೀಡಿರುತ್ತಾರೆ.ಪಟ್ಟಾ ಪ್ರತಿಯನ್ನು ನೋಡಿರುತ್ತೇನೆ. ಅದರಲ್ಲಿ ದಾವ ಸ್ವತ್ತಿನ ಚೆಕ್ಕುಬಂದಿಯನ್ನು ನೋಡಿಸಿರುತ್ತಾರೆ. ಪಟ್ಟಾಪ್ರತಿಯನ್ನು ದಾವಸ್ವತ್ತಿನ ಪೂರ್ವಕ್ಕೆ ಸರಕಾರಿ ಜಮೀನು, ಪಶ್ಚಿಮಕ್ಕೆ ಈಶ್ವರಪ್ಪ ಜಮೀನು, ಉತ್ತರಕ್ಕೆ ಗಂಗಮ್ಮ ಜಮೀನು, ದಕ್ಷಿಣಕ್ಕೆ ಕುಮತಿ ಗ್ರಾಮಕ್ಕೆ ದಾರಿ ಇದೆ. ಅದು ದಾವ ಜಮೀನಿನ ಚೆಕ್ಕು ಬಂದಿ ಅಲ್ಲ ಎಂದರೆ ಸರಿಯಲ್ಲ. ದಾವ ಜಮೀನಿನ ಅಕ್ಕ-ಪಕ್ಕ ನನ್ನ ಜಮೀನುಗಳಿಲ್ಲ. ದಾವ ಜಮೀನನ್ನು ನಾನು ನೋಡದೆ ನಾಲ್ಕು ವರ್ಷ ಆಗಿದೆ. ಈ ನೋಡುತ್ತಿರುವ ಭಾವ ಚಿತ್ರದಲ್ಲಿ ಇರುವುದು ದಾವ ಸ್ವತ್ತುಗಳು ಎಂದರೆ ಅಲ್ಲ. ವಾದಿ

**ಓ.ಎಸ್. ನಂ. 239/2018**

**ಪಿ.ಡಬ್ಲ್ಯು: 02 (Basavanagouda)**

ಪ್ರತಿವಾದಿ ಮತ್ತು ಆತನ ಒಡಹುಟ್ಟಿದವರು ಹಾಗೂ ಅದರಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಈ ದಾವ ಜಮೀನಲ್ಲಿ ಪ್ರತಿವಾದಿ ತಮ್ಮ ಸಣ್ಣ ಬೋರಯ್ಯರವರು 4.14 ಎಕರೆಯಲ್ಲಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಇಲ್ಲ, ಇವತ್ತಿಗೂ ಸಣ್ಣ ಬೋರಯ್ಯನ ಸ್ವಾಧೀನದಲ್ಲಿ ಇದೆ ಎಂದರೆ ಇಲ್ಲ. ಪಟ್ಟಾ ಪತ್ರದಲ್ಲಿ ಚೆಕ್ ಬಂದಿ ತೋರಿಸಿಲ್ಲ ಎಂದರೆ ಚೆಕ್ಕು ಬಂದಿಯನ್ನು ನಾನು ನೋಡಿಲ್ಲ. ಸಾಕ್ಷಿ ಮುಂದುವರೆದು ವಾಸ್ತವದಲ್ಲಿ ಅದೇ ಚೆಕ್ಕು ಬಂದಿ ಇದೆ.

ವಾದಿ ನನ್ನ ರಾಜಕೀಯ ಪಕ್ಷದಲ್ಲಿ ಇದ್ದು, ಪ್ರತಿವಾದಿ ಎದುರುಪಕ್ಷಗಾರರಾದ ಕಾರಣ ವಾದಿಗೆ ಸಹಾಯವನ್ನು ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಅನೇಕಬಾರಿ ಬೇರೆ ಪ್ರಕರಣಗಳಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಕ್ತಾಯ.**

**ಮರು ವಿಚಾರಣೆ ಇಲ್ಲ.**

**(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ಕೂಡ್ಲಿಗಿ.**